**ಓ.ಎಸ್. ನಂಃ 140/2020**

**ಡಿ.ಡಬ್ಲ್ಯೂಃ 1**

**ದಿನಾಂಕ 14.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಕೆ.ಪಿ.ವಕೀಲರಿಂದಃ**

7. ನಮಗೆ ಸೇರಿದ 2 ಎರಕೆ 6 ಗುಂಟೆ ಜಮೀನು ಪೋಡು ಆದ ನಂತರದಲ್ಲಿ ಸರ್ವೇ ನಂಬರ್ 23/3 ಎಂದು ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯ ಸರ್ವೇ ನಂಬರ ಪೋಡಾದ ನಂತರದಲ್ಲಿ 23/16 ಎಂದು ಬದಲಾಗಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಡಿ.ಡಿ.ಎಲ್.ಆರ್ ರವರ ಕಚೇರಿಯಲ್ಲಿ ಸಲ್ಲಿಸಿರುವ ಮೇಲ್ಮನವಿಯ ಸಂಖ್ಯೆ 138/2020-21 ಅಂತ ಇರುತ್ತದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ವಾದಿಗೆ ಸೇರಿದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಡಿ.ಡಿ.ಎಲ್.ಆರ್ ರವರ ಕಚೇರಿಯಲ್ಲಿ ಸುಳ್ಳು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

8. ವಾದಿಯು ಪ್ರಸ್ತುತ ದಾವಾ ಆಸ್ತಿಯಲ್ಲಿ ಹೊಗೆ ಸೊಪ್ಪು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.1 ರ ವಿಭಾಗ ಪತ್ರದ ಐಟಂ ನಂ.1 ರ ಆಸ್ತಿಯ ಚೆಕ್ಕುಬಂಧಿಯನ್ನು ಬರೆಸುವ ಪೂರ್ವದಲ್ಲಿ ನೀವೇನಾದರೂ ಸರ್ವೇ ಮಾಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಡಿ.1 ರ ವಿಭಾಗ ಪತ್ರದಲ್ಲಿ ಪಾಲು ಮಾಡಿಕೊಂಡಿರುವ ಆಸ್ತಿಗಳೆಲ್ಲವೂ ಒಂದೇ ಹಿಡುವಳಿಯಲ್ಲಿ ಇದ್ದ ಕಾರಣ ನಾವು ಸರ್ವೇ ಮಾಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವೇ ನಿಡಿ.1 ರಲ್ಲಿ ಆಸ್ತಿಗಳ ಚೆಕ್ಕುಬಂಧಿಗಳನ್ನು ಹೇಳಿ ಬರೆಸಿರುತ್ತೇವೆ. ನಮ್ಮ ಆಸ್ತಿಗಳ ಹಿಂದಿನ ದಾಖಲೆಗಳ ಆಧಾರದ ಮೇಲೆ ನಾವು ನಿಡಿ.1 ರಲ್ಲಿ ಆಸ್ತಿಗಳ ಚೆಕ್ಕುಬಂಧಿಗಳನ್ನು ಬರೆಸಿರುತ್ತೇವೆ.

9. ನಿಡಿ.1 ರ ವಿಭಾಗ ಪತ್ರದ 'ಸಿ' ಅನುಸೂಚಿ ಆಸ್ತಿಯಾದ ಸರ್ವೇ ನಂಬರ್ 23/16 ರ 20 ಗುಂಟೆ ಜಮೀನು ದಾವಾ ಆಸ್ತಿಯ ಒಳಗಡೆ ಇರುತ್ತದೆ ಎಂದರೆ ಸರಿಯಲ್ಲ. ನಿಡಿ.1 ರ ವಿಭಾಗ ಪತ್ರದ 'ಸಿ' ಅನುಸೂಚಿ ಆಸ್ತಿಯು ದಾವಾ ಆಸ್ತಿಯ ಭಾಗವಾಗಿದ್ದು, ಸದರಿ ಆಸ್ತಿಯು ರಸ್ತೆಗೆ ಹೊಂದಿಕೊಂಡಿರುವ ಕಾರಣ ಅದನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ರ

ವಿಭಾಗ ಪತ್ರದ 'ಸಿ' ಅನುಸೂಚಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನನ್ನ ಸಹೋದರನಾದ ರಾಮನಾಯಕರವರು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 108/2020 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿಯು ರಾಮನಾಯಕರವರು ಅಸಲು ದಾವೆ ಸಂಖ್ಯೆ 108/2020 ರ ದಾವೆಯನ್ನು ಹೂಡಿರುವುದು ನಿಜ ಎಂದು ನುಡಿದಿರುತ್ತಾರೆ.

10. ತಮ್ಮ ತಂದೆಯ ಮರಣದ ನಂತರದಿಂದ ಇಲ್ಲಿಯವರೆಗೂ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾವು ವಿನಾಕಾರಣ ವಾದಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**